**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.**

**ಸಿಸಿ ಸಂಖ್ಯೆ ಃ 3362/2025**

ಪಿರ್ಯಾದುದಾರರು ಃ ಕವಲಂದೆ ಪೊಲೀಸ್ ಠಾಣೆ, ನಂಜನಗೂಡು

ವಿರುದ್ದ

ಆರೋಪಿಗಳುಃ

1. ಅರಮಾನ್ ಶೇಕ್ ಬಿನ್ ಲೇಟ್ ನಾಜಿರ್ ಶೇಕ್ 22 ವರ್ಷ
ವಾಸಃ ಹಳೇಪುರ ಗ್ರಾಮ, ನಂಜನಗೂಡು ತಾಲ್ಲೂಕು

*** *** ***

ಆಪಾದನೆ

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., *1*ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:-

ದಿನಾಂಕ:- 27.08.2025 ರಂದು ಸಂಜೆ ಸುಮಾರು 19.00 ಗಂಟೆ ಸಮಯದಲ್ಲಿ, ನಂಜನಗೂಡು ತಾಲ್ಲೂಕು ತೊರವಳ್ಳಿ, - ಚಿಕ್ಕಹೊಮ್ಮ ಗ್ರಾಮಗಳ ನಡುವಿನ ರಸ್ತೆ, ತೊರವಳ್ಳಿ ಗ್ರಾಮದ ಹಾಲಿನ ಡೈರಿಯ ಹತ್ತಿರ ಮಹದೇವಪ್ಪ ರವರ ಜಮೀನಿನ ಹತ್ತಿರ ಚಾಸಾ.01 ರವರ ತಂದೆ ರಾಚಪ್ಪಸ್ವಾಮಿ ರವರು ರಸ್ತೆಯ ಎಡಭಾಗದಲ್ಲಿ ಬರ್ಹಿದೆಸೆಗೆ ವಾಪಸ್ಸು ಬರುತ್ತಿದ್ದಾಗ 1 ನೇ ಆರೋಪಿತರಾದ ನೀವು ಕೆಎ-10 ಡಬ್ಲೂ-9037 ಬೈಕಿನ ಚಾಲಕನಾಗಿದ್ದು, ಸದರಿ ಬೈಕನ್ನ ಚಿಕ್ಕಹೊಮ್ಮ ಕಡೆಯಿಂದ ತೊರವಳ್ಳಿ ಗ್ರಾಮದ ಕಡೆಗೆ ಅತೀವೇಗ ಹಾಗೂ ಅಜಾಗರುಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ

ಓಡಿಸಿಕೊಂಡು ಬಂದು ನಡೆದುಕೊಂಡು ಬರುತ್ತಿದ್ದ ರಾಚಪ್ಪಸ್ವಾಮಿ ರವರಿಗೆ ಡಿಕ್ಕಿ ಮಾಡಿ ಅಪಘಾತ ಪಡಿಸಿರುತ್ತೀರಿ. ಆದ್ದರಿಂದ 1ನೇ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.281 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿತರಾದ ನೀವು ಮಾಡಿದ ಸದರಿ ಅಪಘಾತದಿಂದ ರಾಚಪ್ಪಸ್ವಾಮಿ ರವರು ಕೆಳಗಡೆ ಬಿದ್ದು ಅವರ ಬಲ ತೋಳು, ಬಲಕಾಲು, ತಲೆ, ಮೈಕೈಗೆ ಪೆಟ್ಟಾಗಿ ಅವರನ್ನ ಯಾವುದೋ ಆಟೋದಲ್ಲಿ ಸಂತೇಮರಳ್ಳಿ ಆಸ್ಪತ್ರೆಗೆ ಅಲ್ಲಿಂದ 108 ಅಂಬ್ಯುಲೆನ್ಸ್ ನಲ್ಲಿ ಚಾಮರಾಜನಗರ ಸಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲಿಸಿದ್ದು ದಿ: 28.08.2025 ರಂದು ಬೆಳಗ್ಗೆ, 8.58 ಗಂಟೆ ಸಮಯದಲ್ಲಿ, ರಾಚಪ್ಪಸ್ವಾಮಿ ರವರು ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿರುತ್ತಾರೆ.ಆದ್ದರಿಂದ, ಆರೋಪಿಯಾದ ನೀವು ಅಪರಾಧಿಕ ಮಾನವ ಹತ್ಯೆ ಎಂದು ಪರಿಗಣಿಸಲಾಗದ ದುಡುಕಿನ ಮತ್ತು ನಿರ್ಲಕ್ಷ್ಯತನದ ವಾಹನ ಚಾಲನೆ ಮಾಡಿ ಮೇಲೆ ಹೇಳಿದ ವ್ಯಕ್ತಿಯ ಮರಣವನ್ನುಂಟು ಮಾಡಿರುತ್ತೀರಿ. ಆದ್ದರಿಂದ 1ನೇ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.106(1) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ಆಪಾದಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿತರಾದ ನೀವು ಚಾಲನಾ ಪರವಾನಗಿ ಇಲ್ಲದೆ ವಾಹನವನ್ನು ಚಲಾಯಿಸಿರುತ್ತೀರಿ. ಆದ್ದರಿಂದ 1ನೇ ಆರೋಪಿಯಾದ ನೀವು ಭಾರತೀಯ ಮೋಟಾರು ವಾಹನಗಳ ಕಾಯಿದೆ ಕಲಂ.3(1)

ಸಹವಾಚಕ ಕಲಂ.181 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿತರಾದ ನೀವು ಸದರಿ ಅಪಘಾತದ ನಂತರ ವಾಹನವನ್ನು ನಿಲ್ಲಿಸದೆ, ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೆ ಹಾಗೂ ಅಪಘಾತದ ಮಾಹಿತಿಯನ್ನು ಮಾಹಿತಿಯನ್ನು ಪೊಲೀಸರಿಗೆ ನೀಡಿದೆ ಹೊರಟುಹೋದ ಕಾರಣ ಭಾರತೀಯ ಮೋಟಾರು ಕಾಯಿದೆ ಕಲಂ 187 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

1. **ಈಗ ನಿಮಗೆ ಓದಿ ಹೇಳಿದ ನಿಮ್ಮ ಮೇಲಿನ ಆರೋಪ ನಿಮಗೆ ತಿಳಿಯಿತೇ?**
   **ಉಃ**

2. **ನಿಮ್ಮ ಮೇಲಿರುವ ಆರೋಪವನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ಪರವಾಗಿ ವಿಚಾರಣೆ ನಡೆಸಲು ಬಯಸುವಿರಾ?**
   **ಉಃ**

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 22.06.2026 ರಂದು ತೆಗೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

**1ನೇ ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,
ನಂಜನಗೂಡು.

## 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.

## ಸಿಸಿ ಸಂಖ್ಯೆ : 3362/2025

ಪಿರ್ಯಾದುದಾರರು : ಕವಲಂದೆ ಪೊಲೀಸ್ ಠಾಣೆ, ನಂಜನಗೂಡು

ವಿರುದ್ಧ

ಆರೋಪಿಗಳು:

2. ಮರಿಸ್ವಾಮಿ ಬಿನ್. ಮಾದಶೆಟ್ಟಿ 50 ವರ್ಷ
ವಾಸಃಸಂತೇಮರಹಳ್ಳಿ ಗ್ರಾಮ, ಚಾಮರಾಜನಗರ ತಾಲ್ಲೂಕು

*** *** ***

ಆಪಾದನೆ

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., *1*ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:-

ದಿನಾಂಕ:- 27.08.2025 ರಂದು ಸಂಜೆ ಸುಮಾರು 19.00 ಗಂಟೆ ಸಮಯದಲ್ಲಿ, ನಂಜನಗೂಡು ತಾಲ್ಲೂಕು ತೊರವಳ್ಳಿ- ಚಿಕ್ಕಹೊಮ್ಮ ಗ್ರಾಮಗಳ ನಡುವಿನ ರಸ್ತೆ ತೊರವಳ್ಳಿ ಗ್ರಾಮದ ಹಾಲಿನ ಡೈರಿಯ ಹತ್ತಿರ ಮಹದೇವಪ್ಪ ರವರ ಜಮೀನಿನ ಹತ್ತಿರ ಚಾಸಾ.1 ರವರ ತಂದೆ ರಾಚಪ್ಪಸ್ವಾಮಿ ರವರು ರಸ್ತೆಯ ಎಡಭಾಗದಲ್ಲಿ ಬರ್ಹಿದೆಸೆಗೆ ವಾಪಸ್ಸು ಬರುತ್ತಿದ್ದಾಗ 1ನೇ ಆರೋಪಿಯು ಕೆಎ 10 ಡಬ್ಲ್ಯೂ 9037 ಬೈಕಿನ ಚಾಲಕನಾಗಿದ್ದು, ಸದರಿ ಬೈಕನ್ನ ಚಿಕ್ಕಹೊಮ್ಮ ಕಡೆಯಿಂದ ತೊರವಳ್ಳಿ ಗ್ರಾಮದ ಕಡೆಗೆ ಅತೀವೇಗ ಹಾಗೂ ಅಜಾಗರುಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಓಡಿಸಿಕೊಂಡು ಬಂದು ರಾಚಪ್ಪಸ್ವಾಮಿ ರವರಿಗೆ ಡಿಕ್ಕಿ ಮಾಡಿ ಅಪಘಾತ ಪಡಿಸಿದ್ದು, 1ನೇ ಆರೋಪಿಯು

ಚಾಲನೆ ಮಾಡುತ್ತಿದ್ದ ನಿಮ್ಮ ಮಾಲೀಕತ್ವದ ಕೆಎ-10-ಡಬ್ಲ್ಯೂ-9037 ರ ಆರ್.ಸಿ. ಮಾಲೀಕರಾಗಿದ್ದು, ನಿಮ್ಮ ಮಾಲಿಕತ್ವದ ವಾಹನಕ್ಕೆ ವಿಮೆ ಮಾಡಿಸದೆ 1ನೇ ಆರೋಪಿಗೆ ಚಾಲನೆ ಮಾಡಲು ನೀಡಿದ ಕಾರಣ, 2ನೇ ಆರೋಪಿಯಾದ ನೀವು 196 ರ ಐ.ಎಂ.ವಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂಬ ಆರೋಪಣೆ ಇದೆ.

**ಈಗ ನಿಮಗೆ ಓದಿ ಹೇಳಿದ ನಿಮ್ಮ ಮೇಲಿನ ಆರೋಪ ನಿಮಗೆ ತಿಳಿಯಿತೇ?**

**ಉಃ**

**ನಿಮ್ಮ ಮೇಲಿರುವ ಆರೋಪವನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ಪರವಾಗಿ ವಿಚಾರಣೆ ನಡೆಸಲು ಬಯಸುವಿರಾ?**

**ಉಃ**

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 22.06.2026 ರಂದು ತೆಗೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

**1ನೇ ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,
ನಂಜನಗೂಡು,